**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂಃ 2671/2021**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಶಿವಪ್ಪ ಅಡರಕಟ್ಟಿ |
| ತಂದೆಯ ಹೆಸರು | ಃ | ಸಣ್ಣನಿಂಗಪ್ಪ |
| ವಯಸ್ಸು | ಃ | 66 ವರ್ಷ |
| ಉದ್ಯೋಗ | ಃ | ನಿವೃತ್ತ ನೌಕರ |
| ವಾಸ ಸ್ಥಳ | ಃ | ಧಾರವಾಡ . |

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು : 19-08-2023**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ನನಗೆ ಚಾಸಾ-1 ರವರ ಪರಿಚಯ ಇದೆ . ಕಳೆದ 3 ವರ್ಷಗಳ ಹಿಂದೆ ಚಾಸಾ-1 ರವರ ಬಂಗಾರದ ಸರ ಯಾರೋ ದೋಚಿಕೊಂಡು ಹೋಗಿದ್ದರು ಎನ್ನುವ ಬಗ್ಗೆ ಪೋಲಿಸರು ನನ್ನ ಮನೆ ಉದಯಗಿರಿಯ ವನಶ್ರೀ ನಗರದ ಡೆಂಟಲ್ ಕಾಲೇಜು ಹತ್ತಿರ ಬಂದು 58 ನೇ ಮುಖ್ಯ ರಸ್ತೆಯಲ್ಲಿ ಸ್ಥಳ ಪರಿಶೀಲಿಸಿ ಒಂದು ದಾಖಲೆಗೆ ನನ್ನ ಸಹಿ ಪಡೆದಿದ್ದರು . ನನ್ನ ಸಹಿಯನ್ನು ಈಗ ನೋಡಿ ಗುರುತಿಸಿದ್ದು ಅದನ್ನು ನಿಶಾನೆ-ಪಿ-2(ಸಿ) ಎಂದು ಗುರುತಿಸಲಾಯಿತು . ಆ ದಿನ ನನ್ನ ಜೊತೆ ಚಾಸಾ-2 ಸಹ ಹಾಜರಿದ್ದರು . ಅದಕ್ಕೆ ಕಾಲಕ್ಕೆ ನಿಶಾನೆ-ಪಿ-3 ಮತ್ತು 4 ರ ಪೋಟೋ ತೆಗೆದಿದ್ದರು .

**ಪಾಟೀಸವಾಲುಃ ಆರೋಪಿ ನಂಃ 1 ರವರ ಪರ ಶ್ರೀ ಎಸ್ ಆರ್ ಜೆ ವಕೀಲರಿಂದ**

ಪಂಚನಾಮೆಗೆ ಬರಲು ಪೋಲಿಸರು ನನಗೆ ನೋಟಿಸ ನೀಡಿಲ್ಲ ಎಂದರೆ ಸರಿ . ಪೋಲಿಸರು ಹೇಳಿದ್ದರಿಂದ ನಾನು ನಿಶಾನೆ-ಪಿ-2 ರ ದಾಖಲೆಗೆ ಸಹಿ ಮಾಡಿದ್ದೆ ಎಂದರೆ ಸರಿ . ಅದರಲ್ಲಿ ಎನು ಬರೆದಿದ್ದಾರೆ ಎಂದು ನಾನು ಓದಿ ನೋಡಿಲ್ಲ ಎಂದರೆ ಸರಿ . ಸಾಕ್ಷಿ ಆದರೆ ನನಗೆ ಹೇಳಿದ್ದರು ಎಂದು ಉತ್ತರಿಸಿರುತ್ತಾರೆ . ಸದರಿ ಪಂಚನಾಮೆ ಬರೆಯಲು ನಾನು ಮಾಹಿತಿ ನೀಡಿಲ್ಲ ಎಂದರೆ ಸರಿ . ಪೊಲಿಸರು ಹೇಳಿದ್ದರಿಂದ ನಾನು ನಿಶಾನೆ-ಪಿ-3 ಮತ್ತು 4 ರ ಪೋಟೋದಲ್ಲಿ ನಿಂತಿದ್ದೆ ಎಂದರೆ ಸರಿ .

**ಪಾಟೀಸವಾಲುಃ ಆರೋಪಿ ನಂಃ 2 ರಿಂದ 4 ರವರ ಪರ ವಕೀಲರಿಂದ**

ಆರೋಪಿ ನಂಃ 2 ರಿಂದ 4 ರವರ ಪರ ವಕೀಲರು ಮೇಲಿನ ಪಾಟೀಸವಾಲನ್ನು ಅನುಕರಿಸಿಕೊಂಡಿರುತ್ತಾರೆ .

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.